ಸೀನ್‌ಗಳು ಬೇರೆ, ನಟರ ಮುಖದ ಮೇಲಿನ ಸುಕ್ಕು, ಅಲ್ಲಲ್ಲಿ ಇಣುಕಿರುವ ತಪ್ಪುಗಳು ಎಲ್ಲವನ್ನೂ ಸರಿಪಡಿಸುವ ಕಣ್ಣುಗಳು, ಮಾರ್ಗಗಳು ಎಲ್ಲವೂ ಇವೆ. ಇದು ತಾಂತ್ರಿಕ ಔನ್ನತ್ಯ.

ನಟನೆಯನ್ನು ವೈಭವೀಕರಿಸುವ ಅಥವಾ ನಟನೆಯ ಕೊರತೆಯನ್ನು ಬೇರೆಬೇರೆ ರೀತಿಯಿಂದ ತುಂಬಿ ಕೇವಲ ಹೀರೊಯಿಸಂ ಅನ್ನೇ ಎತ್ತಿ ಹಿಡಿಯುವ ಚಮತ್ಕಾರಿಕ ಫ್ರೇಮುಗಳು, ಒಂದೊಂದೇ ಲೈನು ಹೇಳಿದರೂ ಮುಗಿದೇ ಹೋಗುವ ಸೀನುಗಳು, ಅವಕ್ಕೆ ನೂರೆಂಟು ಟೇಕುಗಳು, ಕಣ್ಣು ತಂಪಾಗಿಸುವ ಲೊಕೇಷನ್ನುಗಳು, ದಿರಿಸುಗಳು, ಕಾರು, ಕತೆ, ಸಹನಟರು, ಫೈಟು, ಐಟಂ ಸಾಂಗು ಇತ್ಯಾದಿ. ಒಟ್ಟಾರೆ ಇದು ಎಲೆಯ ತುಂಬಾ ತುಂಬಿ ತುಂಬಿ ಬಡಿಸುವ ಊಟದ ಹಾಗೆ. ಎಲ್ಲವನ್ನೂ ನೀವು ರುಚಿ ನೋಡಬಹುದು, ಆದರೆ ಕಡೆಗೂ ನೀವು ಹುಡುಕುವುದು ನಿಮ್ಮ ನಾಲಿಗೆ ಮೆಚ್ಚುವ, ಅದಕ್ಕೆ ಪರಿಚಯ ಇರುವ ರುಚಿಯನ್ನೇ! ಅದೇ ರೀತಿಯಲ್ಲಿ ಅತ್ಯಂತ ವೈಭವದ ಸಿನಿಮಾ ನೋಡಿ ಹೊರಬಂದಾಗಲೂ ನಿಮಗೆ ನೆನಪಾಗುವುದು ನಿಮಗೆ 'ಇಂಪ್ರೆಷನೆಬಲ್' ಅನ್ನಿಸಿದ ಸಂಗತಿಗಳು ಮಾತ್ರ. ಹೀರೊ, ಹೀರೊಯಿನ್, ಅವರ ಡ್ರೆಸ್ಸು, ಯಾವುದೋ ಡೈಲಾಗು, ಯಾವುದೋ ಹಾಡು ಎಬ್ಬಿಸಿದ ಭಾವನೆ, ಅದರ ಶೂಟಿಂಗ್ ಲೊಕೇಷನ್ನು, ಕ್ಯಾಮೆರಾ ಆಂಗಲ್ಲು, ಡ್ರೋನ್ ಷಾಟು ಹೀಗೆ ಬಿಡಿಬಿಡಿ ಆಗಿ ಮನಸ್ಸಿನಲ್ಲಿ ದಾಖಲಾಗುತ್ತವೆ.

ಅದೇ ನಾಟಕದಲ್ಲಿ? ಇಷ್ಟು ಹೊತ್ತಿಗೆ ನಿಮಗೆ ಗೊತ್ತಾಗಿರಬೇಕು. ನಟನೆ ಬಾರದೆ ಇರುವವನಿಗೆ ನಾಟಕದಲ್ಲಿ ಹೀರೊಯಿಸಂ ಇರುವುದಿಲ್ಲ. ಯಾಕೆಂದರೆ, ಇಲ್ಲಿ ವಸ್ತುಸ್ಥಿತಿ ಇದೆ, ಕೊರತೆ ತುಂಬಿಸುವ ಚಕಮಕ ಇಲ್ಲ. ಕಂಪನಿ ನಾಟಕಗಳಲ್ಲಿ ಶಿಸ್ತು ಪಾಲನೆಯೇ ಮುಖ್ಯ. ಹಳ್ಳಿಗಳಲ್ಲಿ ಹಬ್ಬದ ಸಮಯಕ್ಕೆ ನಡೆಯುವ ನಾಟಕಗಳಲ್ಲಿ 'ದೊಡ್ಡವರಿಗೆ' ದೊಡ್ಡ ಪಾರ್ಟು ಅಂತ ಸಿಕ್ಕರೂ ಅವರದನ್ನು ನಟನೆಯ ಮೂಲಕ, ಭರ್ಜರಿ ಕಾಸ್ಟ್ಯೂಮುಗಳ ಮೂಲಕ ದಕ್ಕಿಸಿಕೊಳ್ಳಲೇ ಬೇಕು. ಇಲ್ಲದಿದ್ದರೆ ಊರಿನ ಮುಂದೆ ಮರ್ಯಾದೆ ಹೋಗುತ್ತದೆ ಅನ್ನುವ ಭಯ ಇರುತ್ತದೆ. ಅದೊಂದು ಅಗ್ನಿದಿವ್ಯ. ಪರಿಶ್ರಮದಿಂದಲೇ ಹಾದು ಗೆಲ್ಲಬೇಕು.

ಎಷ್ಟೋ ನಾಟಕಗಳಲ್ಲಿ ವೈಯಕ್ತಿಕ ಪ್ರತಿಷ್ಠೆಗಳು ಫೈಸಲ್ ಆಗಿದ್ದೂ ಇದೆ. ನಾನಿರುವ ಸ್ಥಳದ ಸುತ್ತಮುತ್ತ ಹಳ್ಳಿಗಳಿವೆ. ಅಲ್ಲಿ ಒಂದು ಹಳ್ಳಿಯ ನಾಟಕದ ಸಮಯದಲ್ಲಿ ಅರ್ಜುನ ಮತ್ತು ಕೃಷ್ಣನ ಪಾತ್ರಧಾರಿಗಳಿಗೆ ಹಿಂದಿನ ಯಾವುದೋ ಜಗಳವನ್ನು ತೀರಿಸಿಕೊಳ್ಳಲು ನಾಟಕ ಪ್ರದರ್ಶನದ ದಿನವೇ ಸೂಕ್ತವಾಗಿ ಕಂಡು, ಅರ್ಜುನ ಕೃಷ್ಣನಿಗೆ ಬಾಣ ಬಿಟ್ಟು ಕೃಷ್ಣನ ಒಂದು ಹಲ್ಲೇ ಮುರಿದು ಹೋಗಿತ್ತು. ಈ 'ದಂತ ಕತೆ' ಹಳ್ಳಿಯಲ್ಲಿ ಬಹಳ ದಿನ ಸುತ್ತು ಹೊಡೆದು ಮತ್ತೊಂದು ನಾಟಕದ ಸಮಯದಲ್ಲಿ ಕೃಷ್ಣನ ಪಾತ್ರಧಾರಿ ಅರ್ಜುನನ ಜೊತೆ ಸಂಧಾನ ಮಾಡಿಕೊಂಡ ಹಾಗೆ ನಟಿಸಿ, ಇನ್ನೊಂದು ನಾಟಕಕ್ಕೆ ಇಬ್ಬರೂ ಕೂಡಿ ಅಭಿನಯ ಮಾಡುವಾಗ ಕೃಷ್ಣ ಭೀಮನ ಗದೆ ಅನಾಮತ್ತಾಗಿ ಎತ್ತಿಕೊಂಡು ಅರ್ಜುನನ ಮಕ ಕೆತ್ತಿ ಹೋಗುವ ಹಾಗೆ ಮಾಡಿದ್ದ. ಆಮೇಲೆ, ಇಬ್ಬರೂ ನಾಟಕ ಮಾಡುವುದು ಬಿಟ್ಟರು ಎನ್ನುವುದು ಬೇರೆ ಮಾತು.

ಈಗ ನಮ್ಮ ವಿಷಯಕ್ಕೆ ವಾಪಸು ಬರುವುದಾದರೆ ಸ್ಟೇಜಿನ ಮೇಲೆ ನಟರ 'ಪ್ರೆಸೆನ್ಸ್' ಅವರ ಎತ್ತರ/ಗಾತ್ರ ಮಾತುಗಳ ಡೆಲಿವರಿ, ಅವುಗಳನ್ನು ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಎಲ್ಲವೂ ಬೇಕೇ ಬೇಕು. ವಾಟ್ ಯು ಸೀ ಇಸ್ ವಾಟ್ ಯು ಗೆಟ್, ನೋಡಿ ಮತ್ತದೇ ಮಾತು!

ನಾಟಕದಲ್ಲಿ ನಿಮ್ಮ ಮುಂದೆ ಬರುವುದು ಒಬ್ಬ ಸಂಪೂರ್ಣ ಕಲಾವಿದ/ದೆ ಮಾತ್ರ. ಅವರು ನಾಟಕ ನಡೆಯುತ್ತಿರುವ ಅಷ್ಟೂ ಸಮಯದಲ್ಲಿ ನಿಮಗೆ ಮುಖಾಮುಖಿಯಾಗುತ್ತಾರೆ. ನಿಮ್ಮೊಂದಿಗೆ ಅವರೂ ನಾಟಕದಲ್ಲಿ ತೊಡಗಿಸಿಕೊಳ್ಳುತ್ತಾರೆ. ಅದಕ್ಕಾಗಿ ತಾಲೀಮು ಮಾಡಿರುತ್ತಾರೆ. ತಪ್ಪಿಸಿದರೆ ಬೈಗುಳ ಗ್ಯಾರಂಟಿ. ತಾಲೀಮು ಎನ್ನುವುದು ಪ್ರೇಕ್ಷಕರಿಗೆ ತಿಳಿಯದೆ ನಡೆದಿರುತ್ತದೆ. ಅದು ಕಲೆ ಎನ್ನುವ